ಚರ್ಚಿಸಿ ಈ ನಿರ್ಣಯವನ್ನು ತೆಗೆದುಕೊಂಡಿದೆ. ಪೊಲೀಸ್ ಸ್ಟೇಷನ್‌ಗೆ ಅಥವಾ ಇನ್ಯಾವುದಕ್ಕಾದರೂ ಏನಾದರೂ ತೊಂದರೆಯಾದರೆ ನಿಶ್ಚಿತವಾಗಿ ನಮ್ಮ ಸರ್ಕಾರದಲ್ಲಿ ಅದಕ್ಕೆ ಪರ್ಯಾಯ ಸ್ಥಳಗಳನ್ನು ಹುಡುಕಿ ಕೊಡುತ್ತೇವೆ. ನಾವು ಅಲ್ಲಿ ಯಾವುದೇ ಸೌಲಭ್ಯಗಳನ್ನು ಒದಗಿಸಲಿಕ್ಕೂ ತೊಂದರೆ ಮಾಡಬೇಕೆಂದಿಲ್ಲ. ಹಾಗಾಗಿ ಇನ್ನೇನಾದರೂ ಕೊರತೆಗಳಾಗಿದ್ದರೆ ಅದನ್ನು ಬೇರೆ ಕಡೆಯಲ್ಲಿ ಎಲ್ಲಿ ಜಾಗವಿದೆ ಅದನ್ನು ಕೊಡುತ್ತೇವೆ. ಶ್ರೀ ರಾಮದಾಸ್‌ರವರು ಇರಬಹುದು, ಅಲ್ಲಿ ಉಸ್ತುವಾರಿ ಸಚಿವರಾಗಿ ಅಥವಾ ಸರ್ಕಾರದಲ್ಲಿ ನಾವು ನಮ್ಮ ಕನ್ನಡ ಸಂಸ್ಕೃತಿ ಇಲಾಖೆ ಅಥವಾ ಬೇರೆ ಬೇರೆ ಇಲಾಖೆಗಳಲ್ಲಿಯೂ ಸಹ ಈ ಎಲ್ಲಾ ವಿಷಯಗಳಲ್ಲಿಯೂ ಸಹ ಈ ಕೇಂದ್ರವನ್ನು ಅಭಿವೃದ್ಧಿಪಡಿಸುವುದರ ಜೊತೆಯಲ್ಲಿ ಸರ್ಕಾರದಿಂದ ಪರ್ಯಾಯವಾಗಿ ಏನಾಗಬೇಕು, ಅದಕ್ಕೆ ನಾನು ರಾಮದಾಸ್‌ರವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಸದಸ್ಯರು ಉಲ್ಲೇಖಿಸಿದಂತೆ ಪೊಲೀಸ್ ಸ್ಟೇಷನ್, ಬೇರೆ ಬೇರೆ ವಿಷಯಗಳಿಗೆ ಜಾಗ ಎಲ್ಲಿ ಬೇಕು ಅದಕ್ಕೆ ಈಗಾಗಲೇ ಜಾಗ ಹುಡುಕಿದ್ದಾರೆ ಅದನ್ನು finalize ಮಾಡಿ ಕೊಡಲು ಅಗತ್ಯ ಕ್ರಮ ತೆಗೆದುಕೊಳ್ಳುತ್ತೇವೆ. ಮೈಸೂರಿಗೆ ಇರುವಂಥ ಒಂದು ಐತಿಹಾಸಿಕ ಮಹತ್ವಕ್ಕೆ ಇನ್ನಷ್ಟು ಹೆಚ್ಚು ಮೆರುಗು ತರುವಂಥ ಕೇಂದ್ರ ಇದಾಗುತ್ತದೆ ಎನ್ನುವ ವಿಶ್ವಾಸ ಇದೆ. ಇಲ್ಲಿ ಯುವಕರಿಗೆ ಸ್ಫೂರ್ತಿ ಕೊಡುವಂಥ ಚಟುವಟಿಕೆಯ ಕೇಂದ್ರವಾಗುತ್ತದೆಂಬ ನಂಬಿಕೆ ಸರ್ಕಾರಕ್ಕಿದೆ.

**ಅಧ್ಯಕ್ಷರು:**– ನೀವು ಇದನ್ನು ಬೇರೆ ರೂಪದಲ್ಲಿ ತನ್ನಿ. ಪ್ಲೀಸ್,

**ಶ್ರಿ ಎಸ್.ಆರ್.ಮಹೇಶ್:**– ಮಾನ್ಯ ಅಧ್ಯಕ್ಷರೆ, ಇದು 40 ಕೋಟಿ ರೂ.ಆಸ್ತಿಯ ವಿಚಾರ. ನನಗೆ ದಯಮಾಡಿ ಅವಕಾಶ ಕೊಡಿ. ನಾನು ಬೇರೆ ವಿಚಾರ ಮಾತನಾಡುತ್ತಿಲ್ಲ.

**ಅಧ್ಯಕ್ಷರು:**– ನೀವು calling attentionಗೆ ಕೇಳಿದ್ದೀರಿ. ಎಲ್ಲದಕ್ಕೂ ಅವಕಾಶ ಕೊಟ್ಟಿದ್ದೇನೆ.

**ಶ್ರೀ ಎಸ್.ಆರ್.ಮಹೇಶ್:**– ರಾಮಕೃಷ್ಣ ಪರಮಹಂಸರ ಬಗ್ಗೆ ನಮಗೆ ಗೌರವವಿದೆ. ಆದರೆ ಅವರ ಹೆಸರಿನಲ್ಲಿ ಕಲ್ಕತ್ತಾದಲ್ಲಿರುವ ಸಂಸ್ಥೆಗೆ ನಮ್ಮ ಆಸ್ತಿಯನ್ನು ಪರಭಾರೆ ಮಾಡುವುದಕ್ಕೆ ನಮ್ಮ ವಿರೋಧವಿದೆ. ಇದಕ್ಕೆ ನೀವು ನ್ಯಾಯ ಕೊಡಿಸಬೇಕು. ಮೂಲಭೂತ ಸೌಕರ್ಯ ಅದನ್ನು ಮಾಡಿಕೊಡಬೇಕು. ಇಲ್ಲದಿದ್ದರೆ ನಾನು ಧರಣಿ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಎಸ್.ಆರ್.ಮಹೇಶ್‌ರವರು ಸದನದ ಬಾವಿಗಳಿದು ಧರಣಿ ಮಾಡುತ್ತಿದ್ದರು)

**ಅಧ್ಯಕ್ಷರು:** ತಾವು ತಮ್ಮ ಸ್ಥಾನಕ್ಕೆ ಹೋಗಿ.

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):**– ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ ಎಷ್ಟು ಒಳ್ಳೆಯ ರಚನಾತ್ಮಕ ಕೆಲಸಗಳನ್ನು ಮಾಡುತ್ತಿದೆ ಎನ್ನುವುದು ನಾಡಿಗೇ ಗೊತ್ತಿದೆ. ಅದೊಂದು ಯಾರದೋ ಖಾಸಗಿ ಒಡೆತನದಲ್ಲಿರುವ ಸಂಸ್ಥೆಯಲ್ಲ, ಅದೊಂದು ಸಾರ್ವಜನಿಕ ಸಂಸ್ಥೆ. ಸರ್ಕಾರದಲ್ಲಿಯೂ ಎಲ್ಲಾ ಹಂತದಲ್ಲಿಯೂ ಈ ರೀತಿ ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡುವುದನ್ನು ನಾವು ಮುಕ್ತವಾಗಿ ಬೆಂಬಲಿಸಬೇಕಾಗುತ್ತದೆ. ಅದಕ್ಕೆ ಒಂದು ಐತಿಹಾಸಿಕ ಹಿನ್ನೆಲೆ ಇದೆ.

(ಈ ಹಂತದಲ್ಲಿ ಜಾತ್ಯತೀತ ಜನತಾದಳದ ಸದಸ್ಯರಾದ ಶ್ರೀ ಎಸ್.ಆರ್.ಮಹೇಶ್‌ರವರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:**– ಈ ಸಲಹೆಯನ್ನು ಪರಿಶೀಲಿಸುತ್ತೇನೆ.

**ಅಧ್ಯಕ್ಷರು:**– ಮಾನ್ಯ ಸಚಿವರು ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದಾರೆ ದಯವಿಟ್ಟು ನಿಮ್ಮ ಸ್ಥಳಕ್ಕೆ ಹೋಗಿ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:**– ಶ್ರೀ ಎಸ್.ಆರ್.ಮಹೇಶ್‌ರವರ ಭಾವನೆಯನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ.

(ಈ ಹಂತದಲ್ಲಿ ಜಾತ್ಯತೀತ ಜನತಾದಳದ ಸದಸ್ಯರಾದ ಶ್ರೀ ಎಸ್.ಆರ್.ಮಹೇಶ್‌ರವರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

**ಅಧ್ಯಕ್ಷರು:**– ಅದು ಮಠವಲ್ಲ, ಟ್ರಸ್ಟ್, ರಾಮಕೃಷ್ಣ ಆಶ್ರಮದ ಬಗ್ಗೆ ಹಾಗೆ ಲಘುವಾಗಿ ಮಾತನಾಡಬೇಡಿ.

**ಶ್ರೀ ನೆ.ಲ.ನರೇಂದ್ರಬಾಬು:**– ಮಾನ್ಯ ಅಧ್ಯಕ್ಷರೆ ಶ್ರಿ ಎಸ್.ಆರ್. ಮಹೇಶ್‌ರವರಲ್ಲಿ ನಾನು ವಿನಂತಿ ಮಾಡುತ್ತೇನೆ. ಸ್ವಾಮಿ ವಿವೇಕಾನಂದರ ಬಗ್ಗೆ ಸರ್ಕಾರ ಸ್ಮಾರಕವನ್ನು ಮಾಡಬೇಕೆಂಬ ತಮ್ಮ ವಾದವನ್ನು ಒಪ್ಪುತ್ತೇನೆ. ಇದು ತಾವು ಮಠದ ಬಗ್ಗೆ ವಿಶೇಷವಾಗಿ ಕೊಡುತ್ತಿರುವ ಕೊಡುಗೆ, ಶ್ರೀ ಎಸ್.ಎಂ.ಕೃಷ್ಣ ರವರು ಸೇರಿದಂತೆ ಬಹಳಷ್ಟು ಜನ ಮಹನೀಯರು ಅಲ್ಲಿಯೇ ಓದಿರುವುದು. ಆದುದರಿಂದ ಆ ಒಂದು ಸಂಸ್ಥೆಯ ಬಗ್ಗೆ ತಾವು ಸ್ವಲ್ಪ ರಿಯಾಯಿತಿ ಕೊಡಿ.

**ಅಧ್ಯಕ್ಷರು:**– ಲಘುವಾಗಿ ಮಾತನಾಡಬೇಡಿ ಎಂದು ನನ್ನದೂ ಒಂದು ವಿನಂತಿ ಇದೆ.

(ಈ ಹಂತದಲ್ಲಿ ಜಾತ್ಯತೀತ ಜನತಾದಳದ ಸದಸ್ಯರಾದ ಶ್ರೀ ಎಸ್.ಆರ್.ಮಹೇಶ್‌ರವರು ಸದನದ ಬಾವಿಯಲ್ಲಿ ಮಾತನಾಡುತ್ತಿದ್ದರು)

**ಅಧ್ಯಕ್ಷರು:**– Please, ಶ್ರೀ ಮಹೇಶ್‌ರವರೆ, ಪರಿಶೀಲಿಸುತ್ತೇನೆ ಎಂದು ಹೇಳಿದ್ದಾರಲ್ಲ.

**ಶ್ರೀ ಹೆಚ್.ಡಿ.ರೇವಣ್ಣ:**– ಅಲ್ಲಿಯವರೆಗೆ ಆದೇಶವನ್ನು ತಡೆ ಹಿಡಿಯುತ್ತೇವೆಂದು ಹೇಳಲಿ. ಪರಿಶೀಲನೆ ಮಾಡುವವರೆಗಾದರೂ ಆದೇಶವನ್ನು ತಡೆಹಿಡಿಯಬೇಕಲ್ಲವೇ?

**ಅಧ್ಯಕ್ಷರು:**– ಈಗ ಪರಿಶೀಲನೆ ಮಾಡುತ್ತಾರೆ. ರಾಮಕೃಷ್ಣ ಆಶ್ರಮವನ್ನು ಇಡೀ ಜನ ಮೆಚ್ಚುತ್ತಾರೆ.

**ಶ್ರೀ ಹೆಚ್.ಡಿ.ರೇವಣ್ಣ:**– ಸದನಕ್ಕೆ ಮಂತ್ರಿಗಳು ಸರಿಯಾದ ರೀತಿಯಲ್ಲಿ ಉತ್ತರ ಕೊಡಲಿ ಪರಿಶೀಲಿಸಿ ಎಂದು ಹೇಳಿದ ನಂತರ ತಡೆಹಿಡಿಯಲಿ.

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:**– ಮಾನ್ಯ ಅಧ್ಯಕ್ಷರೆ, ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ಅದು ಮಠವಲ್ಲ ಸಂಸ್ಥೆ ಹೀಗೆಲ್ಲಾ ಹೇಳಿದರೆ ಹೇಗೆ ಅವರಿಗೆ ಅರ್ಥೈಸುವುದು, it is not in good taste.

(ಗೊಂದಲ)

**ಶ್ರೀ ಹೆಚ್.ಡಿ.ರೇವಣ್ಣ:**– ಅಲ್ಲಿಯವರೆಗೆ ಆದೇಶವನ್ನು ತಡೆಹಿಡಿಯಲಿ. ಪರಿಶೀಲನೆ ಮಾಡೋಣ.

**ಅಧ್ಯಕ್ಷರು:**– ರಾಮಕೃಷ್ಣ ಆಶ್ರಮವನ್ನು ಬೇರೆ ಮಠದ ಜೊತೆ ಏಕೆ Compare ಮಾಡುತ್ತೀರಿ?

**ಶ್ರೀ ಎಸ್.ಸುರೇಶ್ ಕುಮಾರ್:**– ಮಹಾರಾಜರ ಕೊಡುಗೆ ರಾಜ್ಯಕ್ಕೆ ಸಾಕಷ್ಟಿದೆ. ಅದೇ ಮಹಾರಾಜರು, ವಿವೇಕಾನಂದರು ಹೇಳಿದರೆಂಬ ಕಾರಣಕ್ಕೋಸ್ಕರ ಇವತ್ತುTata Institute ಬಂದಿರುವುದು. Tata Institute ಅನ್ನು ಸರ್ಕಾರ ನಡೆಸುತ್ತಿಲ್ಲ.

(ಈ ಹಂತದಲ್ಲಿ ಜಾತ್ಯತೀತ ಜನತಾದಳದ ಸದಸ್ಯರಾದ ಶ್ರೀ ಎಸ್.ಆರ್.ಮಹೇಶ್‌ರವರು ಸದನದ ಬಾವಿಯಲ್ಲಿ ಮಾತನಾಡುತ್ತಿದ್ದರು)

**ಶ್ರೀ ಎಸ್.ಸುರೇಶ್ ಕುಮಾರ್:–** ಇದೇ ರೀತಿ ವಿಚಿತ್ರ ಪರಿಸ್ಥಿತಿ ಬಂದಾಗ ಕನ್ಯಾಕುಮಾರಿಯಲ್ಲಿರುವ ಬಂಡೆಯನ್ನು ಕೊಡಬೇಕೋ ಬೇಡವೋ ಎಂಬ ಬಗ್ಗೆ ಚರ್ಚೆ ಮಾಡಿ ಇವತ್ತು ಇಡೀ ಪ್ರಪಂಚವನ್ನು ಆಕರ್ಷಿಸುವಂತಹ ಸ್ಮಾರಕ ಕೇಂದ್ರವಾಗಿದೆ. ಯುವಕರಿಗೆ ಪ್ರೇರಣೆಯ ಕೇಂದ್ರ ಬೇಕು, ಶ್ರದ್ಧಾ ಕೇಂದ್ರಗಳು ಬೇಕು. ಅದಕ್ಕೋಸ್ಕರ ಯಾವ್ಯಾವುದಕ್ಕೊ ತಳಕು ಹಾಕುವುದು ಬೇಡ. ರಾಮಕೃಷ್ಣ ಅಶ್ರಮ ಒಂದು ಗೌರವಾನ್ವಿತ ಸಂಸ್ಥೆ. ಅದು ಸ್ವಾರ್ಥಕ್ಕೋಸ್ಕರ use ಮಾಡುವಂತಹ ಸಂಸ್ಥೆಯಲ್ಲ. ಆದುದರಿಂದ ಶ್ರೀ ಎಸ್.ಆರ್.ಮಹೇಶ್‌ರವರು ಸಮಾಜದ ಅವಶ್ಯಕತೆಯನ್ನು ಮನಗಂಡು ದಯವಿಟ್ಟು ಇದಕ್ಕೆ ಸಹಕರಿಸಿ. ಅವರು ಹೇಳಿದ್ದಾರೆ. ನಿಮ್ಮ ಶಾಲೆಗೆ ಮತ್ತು police stationಗೆ ಏನು ಅಗತ್ಯತೆ ಬೇಕೋ ಅದನ್ನು ಮಾಡಿಕೊಡುತ್ತೇವೆ. ಇದು ಸರ್ಕಾರದ ಒಂದು ಜವಾಬ್ದಾರಿ ದಯವಿಟ್ಟು ತಮ್ಮ ಸ್ಥಾನಕ್ಕೆ ಹೋಗಿ.

(ಈ ಹಂತದಲ್ಲಿ ಜಾತ್ಯಾತೀತ ಜನತಾದಳದ ಸದಸ್ಯರಾದ ಶ್ರೀ ಎಸ್.ಆರ್.ಮಹೇಶ್‌ರವರು ಸದನದ ಬಾವಿಯಲ್ಲಿ ಮಾತನಾಡುತ್ತಿದ್ದರು)

**ಅಧ್ಯಕ್ಷರು:–** ದಯವಿಟ್ಟು ಸಹಕರಿಸಿ.

**ಶ್ರೀ ಎಸ್.ಎ.ರಾಮದಾಸ್:–** ಶ್ರೀ ಎಸ್.ಆರ್.ಮಹೇಶ್‌ರವರಲ್ಲಿ ಒಂದು ಮನವಿ. ಅವರು ಹೇಳಿದಂಥದ್ದಕ್ಕೆ ಬೇರೆ C.A site ಕೊಡಬಹುದಾಗಿತ್ತೆಂದು ಹೇಳಿದರು. ನಿರಂಜನ ಮಠದಲ್ಲಿ ಅವರು 23 ದಿವಸಗಳ ಕಾಲ ಇದ್ದು, ಮೈಸೂರು ಮಹಾರಾಜರು ಹೊಲಿಸಿದಂತಹ ಉಡುಗೆಯನ್ನು ತೊಟ್ಟು ಅವರು ಅಮೇರಿಕಾಕ್ಕೆ, ಜಿನೇವಾಗೆ ಹೋದಂತಹ ಸಂದರ್ಭ ಮೈಸೂರಿನಿಂದ ಇದೆ. ಹಾಗಾಗಿ ಅದರ ಸ್ಮಾರಕವನ್ನು ಈಗಾಗಲೇ ಮಾಡಿದ್ದೇವೆ. ಆ ಸ್ಮಾರಕದ ಪಕ್ಕದಲ್ಲಿ ಇರುವಂತಹ ಕಟ್ಟಡ ಆಗುವುದರಿಂದ ಅದರ ಜೊತೆಯಲ್ಲಿ ಸೇರಿಸಬೇಕಾಗಿದೆ. ಸಮಿತಿಯಲ್ಲಿ ಅಧ್ಯಕ್ಷರಾಗಿರುವ ಮಾನ್ಯ ಮುಖ್ಯಮಂತ್ರಿಗಳಿದ್ದಾರೆ ಎಲ್ಲರೂ ಇದ್ದಾರೆ.

(ಈ ಹಂತದಲ್ಲಿ ಜಾತ್ಯತೀತ ಜನತಾದಳದ ಸದಸ್ಯರಾದ ಶ್ರೀ ಎಸ್.ಆರ್.ಮಹೇಶ್‌ರವರು ಸದನದ ಬಾವಿಯಲ್ಲಿ ಮಾತನಾಡಿದರು)

**ಅಧ್ಯಕ್ಷರು:–** ಅದು ಮಠವಲ್ಲ. ಏಕೆ ಮಠವೆಂದು ಹೇಳುತ್ತೀರಿ?

**ಶ್ರೀ ಎಸ್.ಸುರೇಶ್ ಕುಮಾರ್:–** ಸರ್ಕಾರದ ನಿಯಂತ್ರಣವಿರುತ್ತದೆ.

(ಈ ಹಂತದಲ್ಲಿ ಜಾತ್ಯಾತೀತ ಜನತಾದಳದ ಸದಸ್ಯರಾದ ಶ್ರೀ ಎಸ್.ಆರ್.ಮಹೇಶ್‌ರವರು ಸದನದ ಬಾವಿಯಲ್ಲಿ ಮಾತನಾಡುತ್ತಿದ್ದರು)

**ಶ್ರಿ ಎಸ್.ಎ.ರಾಮದಾಸ್:–** ಬೇರೆ ವ್ಯವಸ್ಥೆಯನ್ನು ಮಾಡುತ್ತೇವೆ. ಅವರಲ್ಲಿ ಮನವಿ ಮಾಡುತ್ತಿದ್ದೇವೆ. ಶಾಲೆಗೆ ಮತ್ತು police station ಗೆ ಸಂಬಂಧಪಟ್ಟಂತೆ ಬೇರೆ ವ್ಯವಸ್ಥೆಯನ್ನು ಮಾಡುತ್ತೇವೆ.

**ಅಧ್ಯಕ್ಷರು:–** ಅದು ಸರ್ಕಾರದ ಅಧೀನದಲ್ಲಿದೆ. ಮಾನ್ಯ ಮುಖ್ಯಮಂತ್ರಿಗಳು ಅಧ್ಯಕ್ಷರಾಗಿದ್ದಾರೆ.

**ಶ್ರೀ ಹೆಚ್.ಡಿ.ರೇವಣ್ಣ:–** ಸರ್ಕಾರದ ಪಾಲುದಾರಿಕೆಯಿದೆಯೆಂದು ಅವರು ಹೇಳಲಿ. ಸರ್ಕಾರದ ಹಿಡಿತದಲ್ಲಿದೆಯೆಂದು ಹೇಳಿ.

**ಅಧ್ಯಕ್ಷರು:–** ಮಾನ್ಯ ಮುಖ್ಯಮಂತ್ರಿಗಳೇ ಅಧ್ಯಕ್ಷರು ಎಂದು ಹೇಳಿದ ಮೇಲೆ ಏನರ್ಥ?

**ಶ್ರೀ ಹೆಚ್.ಡಿ.ರೇವಣ್ಣ:–** ಮೊದಲು ತಡೆಹಿಡಿಯಿರಿ ನಂತರ ಪರಿಶೀಲನೆ ಮಾಡಿ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಖಾಸಗಿಯವರಿಗೆ ಕೊಟ್ಟು ಈ ರೀತಿ ಸರ್ಕಾರದ ಆಸ್ತಿ ಖಾಸಗಿಯವರದ್ದು ಆಯಿತು ಇದು ಆಗಬಾರದೆಂಬುದು ಅವರ ಭಾವನೆ. ಇದನ್ನು ಸ್ಪಷ್ಟಪಡಿಸುವುದಕ್ಕೆ ಬಯಸುವುದು ರಾಮಕೃಷ್ಣ ಆಶ್ರಯ ಮತ್ತು ಮಿಷನ್, ಬೇಲೂರು ಮಠ ಏನಿದೆ, ಉಳಿದ ಧಾರ್ಮಿಕ, ಆಧ್ಯಾತ್ಮಿಕ ಸಂಸ್ಥೆಗಳನ್ನು ನಾವೇನು ನೋಡುತ್ತೇವೆ, ಇದಕ್ಕೂ ಇನ್ನೂ ವಿಸ್ತಾರವಾಗಿ ಅಂತರಾಷ್ಟ್ರೀಯ ಮಟ್ಟದಲ್ಲೂ ಸಹ ವಿವೇಕಾನಂದರ ವಿಚಾರವನ್ನು ತಿಳಿಸುತ್ತಿರುವುದು. ಶ್ರೀ ಎಸ್.ಆರ್.ಮಹೇಶ್‌ರವರಿಗೆ ವಿನಯಪೂರ್ವಕವಾಗಿ ಹೇಳುತ್ತೇನೆ, ಈ ವಿಷಯದಲ್ಲಿ ಶ್ರೀ ಎಸ್.ಆರ್.ಮಹೇಶ್‌ರವರನ್ನು ಬಹಳಷ್ಟು convince ಮಾಡುವ ಪ್ರಯತ್ನವನ್ನು ಮಾಡಿದ್ದೇನೆ. ಇದು ಸಮಾಜದ ಅಗತ್ಯತೆ. ಯುವ ಪೀಳಿಗೆ ಡ್ರಗ್ಸ್ ಚಟಕ್ಕೆ ಬಿದ್ದು ಬಲಿಯಾಗುತ್ತಿರುವ ಬಗ್ಗೆ ನಿನ್ನೆ ನಾವೆಲ್ಲಾ ಚರ್ಚೆ ಮಾಡಿದ್ದೇವೆ. ನಮ್ಮ ಯುವ ಸಮುದಾಯಕ್ಕೆ ಸ್ವಾಮಿ ವಿವೇಕಾನಂದರಂತಹ ವ್ಯಕ್ತಿತ್ವ ಮಾದರಿಯಾಗಿದೆ. ಅವರ 150ನೇ ವರ್ಷದ ಜನ್ಮದಿನೋತ್ಸವದ ಹಿನ್ನೆಲೆಯಲ್ಲಿ ಮಾಡುತ್ತಿದ್ದೇವೆ. ಅಲ್ಲಿ ಏನಾದರೂ ಕಾನೂನು ಬಾಹಿರವಾದ ಚಟುವಟಿಕೆಗಳು ನಡೆದರೆ, ಅದನ್ನು ನೋಡುವುದಕ್ಕೆ ಸರ್ಕಾರವಿದೆ. ಅದರ ಜವಾಬ್ದಾರಿ ಯಾವತ್ತೂ ಸರ್ಕಾರಕ್ಕಿದೆ. ನಾವು ಇಷ್ಟು ಉದಾತ್ತವಾದ

ಧ್ಯೇಯೋದ್ದೇಶದಿಂದ ಕೊಡುತ್ತಿರುವುದನ್ನು ವಿರೋಧಿಸುತ್ತಿರುವುದು ಸರಿಯಲ್ಲ. ನಾನು ಇನ್ನೂ ಕಟುವಾಗಿ ಹೇಳಬೇಕಾಗುತ್ತದೆ. ಇಷ್ಟು ಉದಾತ್ತ ವಿಚಾರವನ್ನು, ಉದ್ದೇಶವನ್ನು ಈ ರೀತಿ ಅಡ್ಡಿಪಡಿಸುತ್ತಿರುವುದು ಸರಿಯಲ್ಲ. ಶ್ರೀ ಹೆಚ್.ಡಿ.ರೇವಣ್ಣನವರೆ, ಇಂತಹ ಒಳ್ಳೆಯ ಕೆಲಸಕ್ಕೆ ಸಹಕಾರ ಕೊಡುವಂತೆ ಮಾನ್ಯ ಶಾಸಕರಲ್ಲಿ ತಾವು ವಿನಂತಿ ಮಾಡಿಕೊಳ್ಳಬೇಕು. ತಾವು ಅನುಭವಿ ಹಿರಿಯ ಸದಸ್ಯರಾಗಿದ್ದೀರಿ. ಇಷ್ಟು ಒಳ್ಳೆಯ ವಿಚಾರಕ್ಕೋಸ್ಕರವಾಗಿ ಕೊಡುತ್ತಿದ್ದೇವೆ. ಸ್ವಾಮಿ ವಿವೇಕಾನಂದರು ಯುವಕರಿಗೆ ಸ್ಫೂರ್ತಿ ಕೊಟ್ಟಂತಹವರೆಂದು ಇವತ್ತಿಗೂ ಹೇಳುತ್ತಾರೆ. ಇಡೀ ರಾಷ್ಟ್ರ ಗೌರವ, ಹಮ್ಮೆಪಡುವ ರೀತಿಯಲ್ಲಿ ಸ್ವಾಮಿ ವಿವೇಕಾನಂದರು ನಡೆದುಕೊಂಡಿದ್ದಾರೆ. ಅವರ 150ನೇ ವರ್ಷವನ್ನು ಆಚರಣೆ ಮಾಡುತ್ತಿದ್ದೇವೆ. ಮನೆಮನೆಗಳಲ್ಲಿ ಶಾಲೆ, ಶಾಲೆಗಳಲ್ಲಿ ಇವತ್ತು ಯುವಕ ಸಂಘಗಳಲ್ಲಿ ಸ್ವಾಮಿ ವಿವೇಕಾನಂದರ 150ನೇ ಜನ್ಮದಿನೋತ್ಸವವನ್ನು ಜೋರಾಗಿ ಆಚರಿಸುತ್ತಿದ್ದಾರೆ. ಸರ್ಕಾರ ಇಂತಹ ಒಳ್ಳೆಯ ಕೆಲಸವನ್ನು ಮಾಡಿದಾಗ ಶ್ರೀ ಹೆಚ್.ಡಿ.ರೇವಣ್ಣನವರು, ಶ್ರೀ ಎಸ್.ಆರ್.ಮಹೇಶ್‌ರವರು ವಿರೋಧ ಮಾಡಿದ್ದಾರೆಂಬ ಸಂದೇಶ ಜನರಿಗೆ ಹೋಗುವುದು ಜೆ.ಡಿ.(ಎಸ್) ದೃಷ್ಟಿಯಿಂದ ಕೂಡ ಒಳ್ಳೆಯದಲ್ಲ. ಹಾಗಾಗಿ ನಾನು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಸ್ವಾಮಿ ವಿವೇಕಾನಂದರ ವಿಚಾರಕ್ಕೆ ಜೆ.ಡಿ.(ಎಸ್) ನವರು ವಿರೋಧಿಸಿದ್ದಾರೆಂದರೆ ಸರಿಯಾದ ಭಾವನೆಯಾಗುವುದಿಲ್ಲ. ಶ್ರೀ ಹೆಚ್.ಡಿ.ರೇವಣ್ಣನವರು ಹಾಗೂ ಶ್ರೀ ಎಸ್.ಆರ್.ಮಹೇಶ್‌ರವರು ಇದರ ಹಿನ್ನೆಲೆಯಲ್ಲಿ ಇದರ ಮಹತ್ವವನ್ನು ಅರಿತು ಸಹಕರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಹೆಚ್.ಡಿ.ರೇವಣ್ಣ:–** ಸ್ವಾಮಿ ವಿವೇಕಾನಂದರ ಬಗ್ಗೆಯೇನೂ ನಮ್ಮ ವಿರೋಧವಿಲ್ಲ. ಸಭೆಯ ಗಮನಕ್ಕೆ ತರಬೇಕಾದಾಗ ಸರ್ಕಾರಿ ಆದೇಶವನ್ನು ಓದಿ. ಯಾವುದೋ ಶಾಲೆಯನ್ನು ಕಲ್ಕತ್ತಾದ ಬೇಲೂರು ಮಠದ ರಾಮಕೃಷ್ಣ ಮಠ ಮಿಷನ್ ಸಂಸ್ಥೆಗೆ ಉಚಿತವಾಗಿ ಹಸ್ತಾಂತರ ಮಾಡಿದರೆ, ಬೇಲೂರು ಮಠವೆಂದರೆ ಯಾವುದು? ಸ್ವಾಮಿ ವಿವೇಕಾನಂದರ ಬಗ್ಗೆ ನಮಗೆ ಗೌರವವಿದೆ.

**ಶ್ರೀ ಎಸ್.ಸುರೇಶ್ ಕುಮಾರ್:**– ಪಶ್ಚಿಮ ಬಂಗಾಳ ಭಾಗದ ಬೇಲೂರು ಮಠ.

**ಶ್ರೀ ಹೆಚ್.ಡಿ.ರೇವಣ್ಣ:**– ಮಾನ್ಯ ಕಾನೂನು ಸಚಿವರಷ್ಟು ವಕಾಲತ್ತನ್ನು ವಹಿಸುವುದಕ್ಕೆ ನಮ್ಮಿಂದ ಆಗುವುದಿಲ್ಲ. ಏಕೆಂದರೆ ನಾವು ಅಷ್ಟು ಓದಿಲ್ಲ. ದಯಮಾಡಿ ತಾಳ್ಮೆಯಿಂದ ಇರಿ. ಶ್ರೀ ಎಸ್.ಆರ್.ಮಹೇಶ್‌ರವರು ಕೇಳುತ್ತಿರುವುದು ಸರ್ಕಾರ 100 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಿ, ನಾವೇನೂ ಬೇಡವೆನ್ನುವುದಿಲ್ಲ. ಯಾವುದೋ ಮಠಕ್ಕೆ free ಆಗಿ ಹಸ್ತಾಂತರ ಮಾಡಿದರೆ ಹೇಗೆ? ಬೆಂಗಳೂರಿನಲ್ಲಿರುವ ಎಲ್ಲಾ ಶಾಲೆಗಳನ್ನು ಒಂದೊಂದು ಮಠಕ್ಕೆ ಬರೆದುಕೊಡಿ. ಸ್ವಾಮಿ ವಿವೇಕಾನಂದರ ಆಶ್ರಮಕ್ಕೆ ಒಂದು, ರಾಮಕೃಷ್ಣ ಆಶ್ರಮಕ್ಕೆ ಒಂದು ಹೀಗೆ ಎಲ್ಲಾ ಶಾಲೆಗಳನ್ನು ಬರದುಕೊಡಿ. ಇದು ಸರ್ಕಾರಿ ಕಾಲೇಜು ಜಾಗ, ಬೇರೆಯದಲ್ಲ. MUDA ದಲ್ಲಿ CA site ಇದ್ದರೆ ಕೊಡಿ, ಬೇಡವೆನ್ನುವುದಿಲ್ಲ. ಆದರೆ ಸರ್ಕಾರಿ ಶಾಲೆ ಕಟ್ಟಡವನ್ನು ಹಸ್ತಾಂತರ ಮಾಡುತ್ತೇವೆಂದು ಹೇಳುತ್ತೀರಲ್ಲ? ನೀವು ಆದೇಶವನ್ನು ಓದಿ. ಮಾನ್ಯ ಅಧ್ಯಕ್ಷರೆ, ನಿಮಗೆ ಆದೇಶದ ಪ್ರತಿಯನ್ನು ಕಳುಹಿಸುತ್ತೇನೆ. ಅಲ್ಲಿಯವರೆಗೆ ಇದನ್ನು ತಡೆಹಿಡಿಯಬೇಕಾಗುತ್ತದೆ.

**ಅಧ್ಯಕ್ಷರು:**– ವಿಶೇಷ ಪ್ರಕರಣವೆಂದು ಮಾಡಿದ್ದಾರೆ. ನೀವು ಇದಕ್ಕೆಲ್ಲಾ ಅಡ್ಡಿಪಡಿಸಿದರೆ ಹೇಗೆ?

**ಶ್ರೀ ಹೆಚ್.ಡಿ.ರೇವಣ್ಣ:**– ನಮಗೆ argument ಮಾಡುವುದಕ್ಕಾಗುವುದಿಲ್ಲ. ಯಾವುದೋ ಸರ್ಕಾರಿ ಕಾಲೇಜು ಜಾಗವನ್ನು ತೆಗೆದುಕೊಂಡು ಹೋಗಿ ರಾಮಕೃಷ್ಣ ಮಠಕ್ಕೆ ಕೊಡುತ್ತೇವೆಂದರೆ ಅದರ ಅರ್ಥವೇನು?

**ಅಧ್ಯಕ್ಷರು:**– ಇಲ್ಲಿ ಯಾರೂ ಲಾಭ ಮಾಡುವುದಕ್ಕಾಗುವುದಿಲ್ಲ.

**ಶ್ರೀ ಹೆಚ್.ಡಿ.ರೇವಣ್ಣ:** ಯಾವುದೇ ಕಾರಣಕ್ಕೂ ಇದನ್ನು ಹಸ್ತಾಂತರ ಮಾಡುವುದಕ್ಕಾಗುವುದಿಲ್ಲ. ಅಲ್ಲಿಯವರೆಗೆ ತಡೆಹಿಡಿಯಿರಿ. ತಾವು ಅದಕ್ಕೆ stick on ಆಗುವುದು ಬೇಡ. ಮಾನ್ಯ ಮಂತ್ರಿಗಳು ದಯಮಾಡಿ ಹೇಳಿ.

(ಈ ಹಂತದಲ್ಲಿ ಜಾತ್ಯತೀತ ಜನತಾದಳದ ಸದಸ್ಯರಾದ ಶ್ರೀ ಎಸ್.ಆರ್.ಮಹೇಶ್‌ರವರು ಸದನದ ಬಾವಿಯಲ್ಲಿ ಮಾತನಾಡುತ್ತಿದ್ದರು)

**ಅಧ್ಯಕ್ಷರು:**– ಅವರಿಗೆ ನೀವು ಸಮಾಧಾನ ಹೇಳಿ. ಶಾಸಕರೇ ಆ ಭಾಗದ ಜನರಿಗೆ ಸಮಾಧಾನ ಹೇಳಲಿ.

**ಶ್ರೀ ಹೆಚ್.ಡಿ.ರೇವಣ್ಣ:–** ಸಮಾಧಾನವನ್ನು ನಾವು ಹೇಳುವುದಲ್ಲ. ನೀವು ಮಾನ್ಯ ಮಂತ್ರಿಗಳಿಗೆ ಸಮಾಧಾನ ಹೇಳಿ.

(ಈ ಹಂತದಲ್ಲಿ ಜಾತ್ಯತೀತ ಜನತಾದಳದ ಸದಸ್ಯರಾದ ಶ್ರೀ ವೆಂಕಟರಾವ್ ನಾಡಗೌಡರವರು ಸದನದ ಬಾವಿಗೆ ಬಂದರು)

**ಅಧ್ಯಕ್ಷರು:–** ಶ್ರೀ ವೆಂಕಟರಾವ್ ನಾಡಗೌಡರವರೆ ಬೇಡ ಕುಳಿತುಕೊಳ್ಳಿ

(ಗೊಂದಲ)

**ಶ್ರೀ ನೆ.ಲ.ನರೇಂದ್ರ ಬಾಬು (ಮಹಾಲಕ್ಷ್ಮೀ ಲೇಔಟ್):–** ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರುಗಳಾದ ಶ್ರೀ ಮಹೇಶ್ ಹಾಗೂ ಶ್ರೀ ರೇವಣ್ಣ ಅವರಲ್ಲಿ ಒಂದು ವಿನಂತಿಯನ್ನು ಮಾಡುತ್ತಿದ್ದೇನೆ. ಸ್ವಾಮಿ ವಿವೇಕಾನಂದರು ಬೆಳಗಾಂನಲ್ಲಿ 9 ದಿನಗಳು ತಂಗಿದ್ದಂತಹ ಎರಡು ಸ್ಥಳಗಳಿಗೆ ಬೆಳಗಾಂ ಅಧಿವೇಶನಕ್ಕೆ ಹೋದಾಗ ಅಲ್ಲಿಗೆ ಭೇಟಿ ಮಾಡಿದ್ದೆವು. ಸ್ಮಾರಕಕ್ಕೆ ಹಾಗೂ ಕಪಿಲೇಶ್ವರ ದೇವಸ್ಥಾನಕ್ಕೆ ಹೋಗಿ ಪ್ರತಿನಿತ್ಯ ಧ್ಯಾನ ಮಾಡುವಂತಹ ಜಾಗಕ್ಕೆ ಹೋಗಿದ್ದೆವು. ಪೂಜೆ ಮುಗಿಸಿ ಎರಡು ನಿಮಿಷಗಳ ಕಾಲ ಧ್ಯಾನ ಮಾಡಿ ಹೊರಗಡೆ ಬಂದಾಗ ಇಲ್ಲಿಗೆ ಸ್ವಾಮಿ ವಿವೇಕಾನಂದರು ಬಂದು ಹೋಗುತ್ತಿದ್ದರೆಂದು ಆಮೇಲೆ ಹೇಳಿದರು. ಕಪಿಲೇಶ್ವರ ದೇವಸ್ಥಾನ ಬಹಳ ಪುರಾತನ ದೇವಸ್ಥಾನವಾಗಿದ್ದು, ಧ್ಯಾನ ಮಾಡಿದಾಗ ಅಲ್ಲಿ ನನಗೆ ಆದಂತಹ ರೋಮಾಂಚನ ಮರೆಯುವ ಹಾಗಿಲ್ಲ. ಇಂದು ಅದನ್ನು ನಿರ್ವಹಣೆ ಮಾಡುವವರೆಂದರೆ ಪಶ್ಚಿಮ ಬಂಗಾಳದ ಬೇಲೂರು ಮಠದ Head office. ಅಲ್ಲಿರುವ ಎಲ್ಲಾ ಸ್ವಾಮೀಜಿಗಳು ಕರ್ನಾಟಕದವರೆ. ಆದರೆ ಅದರ ನಿರ್ವಹಣೆ ಸರ್ಕಾರದಲ್ಲಿ ಮಾಡುವುದಕ್ಕಾಗುವುದಿಲ್ಲ. ದಯವಿಟ್ಟು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ ಇಂತಹ ಒಂದು ಸದುದ್ದೇಶ ಇದೆ. ಮತ್ತು ಸ್ವಾಮಿ ವಿವೇಕಾನಂದರ 150ನೇ ವರ್ಷದ ಜನ್ಮ ಜಯಂತಿಯನ್ನು ಆಚರಣೆ ಮಾಡುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ, ಈ ವಿಚಾರದಲ್ಲಿ ಎಲ್ಲರೂ ವಿಶಾಲವಾಗಿ ಒಪ್ಪಿಕೊಂಡು ಮುಂದಿನ ಪೀಳಿಗೆಗೆ ಹಾಗೂ ಅಲ್ಲಿ ಸಂಸ್ಕಾರಗಳನ್ನು ಕೊಡುವಂತಹ ಶಿಕ್ಷಣ ಸಂಸ್ಥೆಗೆ, ನಿರ್ವಹಣೆ ಕೊಟ್ಟಿರುವಂತಹದು, ಅಭಿವೃದ್ಧಿ ಪಡಿಸುವುದಕ್ಕೆ ನಾವು ಮುಂದೆ ಬರಬೇಕು. ಅಲ್ಲಿ ಇನ್ನು ಯಾವುದೇ ಸರ್ಕಾರಿ ಕಟ್ಟಡಗಳನ್ನು ನಿರ್ವಹಣೆ ಮಾಡುವುದಕ್ಕಾಗುವುದಿಲ್ಲ.

**ಶ್ರೀ ಹೆಚ್.ಡಿ.ರೇವಣ್ಣ:–** 36,000 ಚದರಡಿಯ 40 ಕೋಟಿ ರೂ.ಗಳ ಆಸ್ತಿ ಅದು. ರಾಜ್ಯದಲ್ಲಿರುವ ಎಲ್ಲಾ ಜಾಗಗಳನ್ನು ಮಠಕ್ಕೆ ಕೊಡುತ್ತೇವೆಂದು ಅಜೆಂಡಾ ಹಾಕುವುದಕ್ಕೆ ಅವರಿಗೆ ಹೇಳಿ, ಮಾನ್ಯ ಅಧ್ಯಕ್ಷರೆ.

**ಅಧ್ಯಕ್ಷರು:–** ಆರೀತಿ compare ಏಕೆ ಮಾಡುತ್ತೀರಿ? ವಿಶೇಷವಾದ ಕೆಲಸಕ್ಕೆ ಮಾಡಿದಾಗ ತಾವು ಕೋಟಿ, ಇನ್ನೊಂದು ಎಂದು ಏಕೆ ಹೇಳುತ್ತೀರಿ?

**ಶ್ರೀ ಹೆಚ್.ಡಿ.ರೇವಣ್ಣ:** ಒಂದು ಕಡೆ ಭಾಷಣದಲ್ಲಿ ಬಿ.ಜೆ.ಪಿ. ಅವರನ್ನು ಯಾವ ರೀತಿ ಬೈಯುತ್ತಾರೆಂಬುದನ್ನು ನೋಡಬೇಕು. ಇಲ್ಲಿ ಬಂದು ಮಠಗಳಿಗೆ ದುಡ್ಡು ಕೊಡಿ ಎಂದು ಹೇಳುತ್ತಾರೆ. ನಾವೇನೂ ಮಠಗಳಿಗೆ ಬೇಡವೆಂದು ಹೇಳುತ್ತಿಲ್ಲ. ಸ್ವಾಮಿ ವಿವೇಕಾನಂದರಿಗಾದರೂ ಕೊಡಿ, ಯಾರಿಗಾದರೂ ಕೊಡಿ. ಆದರೆ ಸರ್ಕಾರ ಗಮನಿಸಬೇಕು.

**ಅಧ್ಯಕ್ಷರು:–** ಸರ್ಕಾರ ಏನೂ ನಡೆಸುವುದಕ್ಕಾಗುವುದಿಲ್ಲ. ಸುಮ್ಮನೆ ಏಕೆ?

**ಶ್ರೀ ಹೆಚ್.ಡಿ.ರೇವಣ್ಣ:–** ಆದರೆ ಶಾಲಾ ಕಟ್ಟಡ ಕೊಡುವುದು ಬೇಡ. 36,000 ಚದರಡಿಯ 40 ಕೋಟಿ ರೂ.ಗಳ ಆಸ್ತಿಯನ್ನು ಕೊಟ್ಟರೆ ಹೇಗೆ? 15 ಕೋಟಿ ರೂ.ಗಳನ್ನು ಶ್ರೀ ಮಹೇಶ್ ರವರಿಗೆ ಕೊಟ್ಟು ಬಿಡಿ, ಅವರೇ ತೆಗೆದುಕೊಳ್ಳುತ್ತಾರೆ.

**ಶ್ರೀ ಎಸ್.ಸುರೇಶ್ ಕುಮಾರ್(ಮಾನ್ಯ ಕಾನೂನು ಹಾಗೂ ಸಂಸದೀಯ ಸಚಿವರು):-** ಇದಕ್ಕೆ ಇರುವ ಮಹತ್ವವೇ ಬೇರೆ. ಇದು real estate, ಕೋಟಿ, 40 ಕೋಟಿ ಅಲ್ಲ. ಇದು real interest ಇರುವುದು.

**ಶ್ರೀ ಹೆಚ್.ಡಿ.ರೇವಣ್ಣ:–** Interest ಇದ್ದರೆ ಯಾರದಾದ್ರೂ ಮನೆ ಆಸ್ತಿ ಬರೆದು ಕೊಡಿ. ಸರ್ಕಾರಿ ಜಾಗ, ಶಾಲಾ ಕಟ್ಟಡ ಬರೆದು ಕೊಡುವುದಕ್ಕೆ ನಿಮಗೆ ಏನು ಹಕ್ಕಿದೆ?

**ಶ್ರೀ ಟಿ.ಬಿ.ಜಯಚಂದ್ರ (ಶಿರಾ):–** ಮಠ ಎಂದ ಕೂಡಲೇ, ಮಾನ್ಯ ರೇವಣ್ಣನವರಲ್ಲಿ ವಿನಂತಿಸುವುದೇನೆಂದರೆ ಬೇಲೂರು ಮಠಕ್ಕೂ ಬೇರೆ ಮಠಕ್ಕೆ ಹೋಲಿಕೆ ಮಾಡಬೇಡಿ. ರಾಮಕೃಷ್ಣಾಶ್ರಮದಲ್ಲಿ. ಸ್ವಾಮಿ ವಿವೇಕಾನಂದರ 151ನೇ ಜನ್ಮ ದಿನಾಚರಣೆಯನ್ನು, ನಮ್ಮ ಯುವಕರಲ್ಲಿ ಹಾಗೂ ಎಲ್ಲರಲ್ಲಿಯೂ ಸ್ವಾಭಿಮಾನವನ್ನು ಮುಟ್ಟಿಸುವಂತಹ ರೀತಿಯಲ್ಲಿ ಬೋಧನೆಗಳು, ಚಿಂತನೆಗಳು, ವಿಚಾರಗಳನ್ನು ಮಾಡುತ್ತಿವೆ. ರಾಮಕೃಷ್ಣ ಮಿಷನ್ ಅವರ ಬಗ್ಗೆ ಒಂದು ಮಾತನ್ನು ಹೇಳಬೇಕಾದರೆ ಅವರು ಎಲ್ಲಿಯೂ ಸಹ ಮೆಡಿಕಲ್ ಕಾಲೇಜ್

ಆಗಲಿ, ಇಂಜಿನಿಯರಿಂಗ್ ಕಾಲೇಜ್ ಆಗಲಿ ಮಾಡಲಿಲ್ಲ. ಆದರೆ ಅವರು ಮಾಡಿರುವುದು Preliminary education ಗೆ ಮಾತ್ರ. ಅವರು ಸ್ವಾಭಿಮಾನ ತುಂಬಿ ಹೊರಗಡೆ ಬರುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಈ ದೇಶದಲ್ಲಿ ಯಾವುದಾದರೂ ಮಠ ದೇಶದ ಭವಿಷ್ಯದ ದೃಷ್ಟಿಯನ್ನು ಇಟ್ಟುಕೊಂಡು ಕೆಲಸ ಮಾಡುತ್ತಿದೆಯೆಂದರೆ ರಾಮಕೃಷ್ಣ ಮಿಷನ್, ಬೇಲೂರು ಮಠ ಬಿಟ್ಟರೆ ಇನ್ನು ಬೇರೆ ಯಾವುದೂ ಇಲ್ಲ. ಬೇರೆ ಯಾವುದಿದೆ ಎಂದರೆ ನನಗಂತೂ ಗೊತ್ತಿಲ್ಲ. ಈ ವಿಚಾರವಾಗಿ ನಾನು ಹೇಳುತ್ತಿಲ್ಲ. ಮೊನ್ನೆ ದಿವಸ ನಮ್ಮ ಮತಕ್ಷೇತ್ರದಲ್ಲಿ ಶ್ರೀ ವೀರೇಶಾನಂದ ಸ್ವಾಮೀಜಿಯವರು ಬಂದು ಪ್ರವಚನ ಮಾಡಿರುವುದಕ್ಕೆ, ನಾನು ಮುಖ್ಯಮಂತ್ರಿಗಳ ಹತ್ತಿರ ಹೋಗಿ ಶಿರಾ proper ನಲ್ಲಿ ಸುಮಾರು 5–10 ಕೋಟಿ ರೂ.ಗಳ ಬೆಲೆ ಬಾಳುವ 5 ಎಕರೆ ಜಾಗವನ್ನು ರಾಮಕೃಷ್ಣ ಮಿಷನ್‌ಗೆ ಕೊಡಬೇಕು, ಅಲ್ಲಿ ನಾವೇ ಒಂದು ಮಠವನ್ನು ನಿರ್ಮಿಸಬೇಕೆಂದು ತೀರ್ಮಾನ ಮಾಡಿದ್ದೆವು. ಅದಕ್ಕೆ ಎಲ್ಲಾ ರೀತಿಯಲ್ಲಿಯೂ ಸ್ವಾಗತವಿದೆ. ಆದರೆ ಎಲ್ಲೋ ಒಂದು ಕಡೆ ಅಂದರೆ ಬೇಲೂರು ಮಠವನ್ನು ಬೇರೆಮಠದ ಜೊತೆಗೆ ಹೋಲಿಸುವುದು ಬೇಡ. ವಿವೇಕಾನಂದರ ವಿಚಾರಗಳನ್ನು, ಚಿಂತನೆಗಳನ್ನು ಬೇರೆಯವರ ಜೊತೆಗೆ ಹೋಲಿಸುವುದು ಬೇಡ. ಈ ದೇಶಕ್ಕೆ ಹಾಗೂ ಈ ದೇಶದ ಜನಗಳಿಗೆ ಅಂತಹ ಮಠಗಳು ಹಾಗೂ ಮಿಷನ್‌ಗಳು ಬೇಕು. ಒಂದು ಎಕರೆ ಖಾಸಗಿಯವರಿಗೆ ಕೊಟ್ಟಿರುವುದೆಂದು ಹೇಳುತ್ತಾರೆ. ವಿವೇಕಾನಂದರ ವಿಚಾರಗಳಲ್ಲಿ ತೊಡಗಿರುವವರು ಖಾಸಗಿಯವರು ಆಗುವುದಿಲ್ಲ ಎಂಬುದು ನನ್ನ ಭಾವನೆ.

(ಮಾನ್ಯ ಸದಸ್ಯರಾದ ಶ್ರೀ ಎಸ್.ಆರ್.ಮಹೇಶ್ ಅವರು ಸದನದ ಬಾವಿಯಲ್ಲಿ ಮಾತನಾಡುತ್ತಿದ್ದರು)

**ಶ್ರೀ ಟಿ.ಬಿ.ಜಯಚಂದ್ರ:**– ಆ ರೀತಿ ಇಲ್ಲ. ಯಾರ ಅಜೆಂಡಾನೂ ಅಲ್ಲ.

**ಅಧ್ಯಕ್ಷರು:**– ಇದು ಇಡೀ ದೇಶಕ್ಕೆ ಸಂಬಂಧಪಟ್ಟಿರುವುದಾಗಿದೆ. ಇದಕ್ಕೆ ರಾಜಕೀಯ ಬೆರೆಸುತ್ತೀರಲ್ಲಾ?

(ಗೊಂದಲ)

**ಶ್ರೀ ಟಿ.ಬಿ.ಜಯಚಂದ್ರ:**– ದೇಶದಲ್ಲಿ ಯಾರಾದರೊಬ್ಬರು ಜಾತ್ಯತೀತದ ಬಗ್ಗೆ ಮಾತನಾಡಿದಂತಹ ವ್ಯಕ್ತಿ ಈ ದೇಶದಲ್ಲಿ ಯಾರಾದರೂ ಇದ್ದಾರೆಂದರೆ ಅವರು ಸ್ವಾಮಿ ವಿವೇಕಾನಂದರು. ಅವರನ್ನು ನೀವು ಹೇಗೆ ಬಿ.ಜೆ.ಪಿ.ಗೆ

ನಾಯಕರನ್ನಾಗಿ ಮಾಡುತ್ತೀರಿ? ಅವರ ಬೋಧನೆಗಳನ್ನು, ವಿಚಾರಗಳನ್ನು ಅರ್ಥಮಾಡಿಕೊಂಡಿರುವವರಿಗೆ ಜಾತ್ಯತೀತದ ಬಗ್ಗೆ ಅರ್ಥವಾಗುತ್ತದೆ. ಬಿ.ಜೆ.ಪಿ.ಗೆ ಏಕೆ ಕೊಡುತ್ತೀರಿ? ನಮ್ಮನ್ನು ಏಕೆ ಟೀಕೆ ಮಾಡುತ್ತೀರಿ? ನೀವು ಏನಾದರೂ ಮಾಡಿಕೊಳ್ಳಿ, ಪ್ರಶ್ನೆಯೇ ಬೇರೆ. ದಯವಿಟ್ಟು ವಿಧಾನ ಸಭೆಯಲ್ಲಿ ಮಾತ್ರ ರಾಮಕೃಷ್ಣ ಮಿಷನ್‌ಗೆ ಹಾಗೂ ಸ್ವಾಮಿ ವಿವೇಕಾನಂದರ ಬಗ್ಗೆ ಅಪಚಾರ ಬರುವ ರೀತಿಯಲ್ಲಿ ಭಾವನೆ ಬರುವುದು ಬೇಡ, ಚರ್ಚೆಯಾಗುವುದು ಬೇಡ. ನೀವು ಕರೆದು ಏನಾದರೂ ಚರ್ಚೆಮಾಡಿ, ಆದರೆ ಇಲ್ಲಿ ಬೇರೆ ಚರ್ಚೆಯಾಗುವುದು ಬೇಡ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ವೆಂಕಟರಾವ್ ನಾಡಗೌಡರವರು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ಮರಳಿದರು)

**ಶ್ರೀ ಡಿ.ಎನ್.ಜೀವರಾಜ್:–** ಬಿ.ಜೆ.ಪಿ.ಯವರೆಂದು ಹೆಮ್ಮೆ ಪಡಿ.

**ಅಧ್ಯಕ್ಷರು:–** ಇಡೀ ರಾಷ್ಟ್ರ ಹೆಮ್ಮೆ ಪಟ್ಟಿದೆ. ಕೇಂದ್ರ ಸರ್ಕಾರವೂ ಇದನ್ನು ಆಚರಣೆ ಮಾಡುತ್ತಿದೆ.

(ಗೊಂದಲ)

**ಶ್ರೀ ಟಿ.ಬಿ.ಜಯಚಂದ್ರ:–** ನಾವು ಇತ್ತೀಚೆಗೆ ಚಿಕಾಗೋಗೆ ಹೋದಾಗ ನಾವು ಹುಡುಕಿಕೊಂಡು ಹೋದೆವು.

(ಗೊಂದಲ)

**ಶ್ರೀ ವೆಂಕಟರಾವ್ ನಾಡಗೌಡ:–** ಯಾವಾಗಲೂ ಮುಂದಿನ ಬೆಂಚ್‌ನಲ್ಲಿರುವವರೇ ಮಾತನಾಡುತ್ತೀರಿ. ಹಿಂದೆ ಕುಳಿತಿರುವವರಿಗೂ ಅವಕಾಶ ಮಾಡಿಕೊಡಿ.

**ಅಧ್ಯಕ್ಷರು:–** ಹೀಗೇ ಆದರೆ ಮುಂದಿನವರನ್ನು ಕರೆಯುತ್ತೇನೆ.

**ಶ್ರೀ ಆರ್.ಅಶೋಕ್ (ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಗೃಹ ಸಚಿವರು):–** ಒಳ್ಳೆಯ cause ಗೋಸ್ಕರ ಸರ್ಕಾರ ತೀರ್ಮಾನ ಮಾಡಿ ಕೊಟ್ಟಿದ್ದಾರೆ. ಆ ಕ್ಷೇತ್ರದ ಶಾಸಕರು ಶ್ರೀ ಶಂಕರಲಿಂಗೇಗೌಡರು. ಅಲ್ಲಿ ಒಂದು ವಿದ್ಯಾಸಂಸ್ಥೆಯನ್ನು ನಡೆಸುತ್ತಿರುವುದು ಗೊತ್ತಿದೆ, ಮಾನ್ಯ ಉಪನಾಯಕರು ಈ ಬಗ್ಗೆ ಹೇಳಿದ್ದಾರೆ. ನಮ್ಮೆಲ್ಲರ ಅಭಿಪ್ರಾಯ ಅದೇ. ಮಾನ್ಯ ಸದಸ್ಯರಾದ ಶ್ರೀ ಮಹೇಶ್‌ರವರು ಏಕೆ ಈ ರೀತಿ ಮಾಡುತ್ತಿದ್ದಾರೆಂದು ನನಗೂ ಅರ್ಥವಾಗುತ್ತಿಲ್ಲ. ಸ್ವಾಮಿ ವಿವೇಕಾನಂದರು ಉದ್ದೇಶಗಳನ್ನು ಯಾವುದೇ ಮತಕ್ಕಾಗಲಿ,

ಜಾತಿಗಾಗಲಿ ಹೋಲಿಕೆ ಮಾಡಬೇಡಿ. ಅದಕ್ಕೆ ರಿಯಲ್ ಎಸ್ಟೇಟ್‌ನ್ನು ಕಟ್ಟಬೇಡಿ, ಅದನ್ನು ರಿಯಲ್ ಎಸ್ಟೇಟ್ ಮಾಡುವವರಿಗಲ್ಲ ಕೊಡುತ್ತಿರುವುದು. ಅದು ಒಂದು ಸಂಸ್ಥೆ. ದೇಶದ 120 ಕೋಟಿ ಜನ ಭಕ್ತಿಯಿಂದ ಕೈಮುಗಿಯುತ್ತಿರುವ ಸ್ವಾಮಿ ವಿವೇಕಾನಂದರಿಗೆ ಕೊಡುತ್ತಿರುವುದು. ಅದನ್ನು ರಿಯಲ್ ಎಸ್ಟೇಟ್, ಎಷ್ಟು ಕೋಟಿ ಎಂದು ಹೇಳಬೇಡಿ. 500 ಕೋಟಿ ರೂ.ಗಳನ್ನು ಖರ್ಚು ಮಾಡಿ ಎಂದಲ್ಲ.

**ಅಧ್ಯಕ್ಷರು:–** ಹಾಗೆಲ್ಲಾ ಮಾಡುವುದಕ್ಕಾಗುವುದಿಲ್ಲ ಸ್ವಾಮಿ...

**ಶ್ರೀ ಆರ್.ಅಶೋಕ್:–** ದಯವಿಟ್ಟು ಆ ತರಹ ಏನಾದರೂ ಹೇಳಬೇಡಿ ಆ ಏರಿಯಾ ಶಾಸಕರಾದ ಮಾನ್ಯ ಶಂಕರಲಿಂಗೇಗೌಡರು ಈಗಾಗಲೇ ಸಮ್ಮತಿ ಕೊಟ್ಟಿದ್ದಾರೆ, ಆ ದೃಷ್ಟಿಯಿಂದ ಕೊಡುವುದು ಒಳ್ಳೆಯ ಉದ್ದೇಶ. ಮಹೇಶ್‌ರವರು ಒಳ್ಳೆಯ ಸ್ನೇಹಿತರಾಗಿದ್ದು ಅವರ ಹತ್ತಿರ ನಾನೂ ಸಹ ವಿನಂತಿ ಮಾಡುತ್ತೇನೆ. ಪೊಲೀಸ್ ಸ್ಟೇಷನ್ ಅದು–ಇದೂ ಬೇಡ. ಒಂದು ಒಳ್ಳೆಯ cause ಗೋಸ್ಕರ ಕೊಟ್ಟಿದ್ದಾರೆ, ಒಳ್ಳೆಯ ಉದ್ದೇಶಕ್ಕೋಸ್ಕರ ಕೊಟ್ಟಿದ್ದಾರೆ, ಪೊಲೀಸ್ ಸ್ಟೇಷನ್‌ಗೆ ಬೇಕಾದರೆ ಇನ್ನಷ್ಟು ಜಾಗಗಳು ಮೈಸೂರಿನಲ್ಲಿದ್ದು ಅದನ್ನು ತೆಗೆದುಕೊಳ್ಳೋಣ ಇಂತಹ ಒಂದು ಒಳ್ಳೆಯ cause, ಸ್ವಾಮಿ ವಿವೇಕಾನಂದರಿರಬಹುದು, ಮಹಾತ್ಮ ಗಾಂಧೀಜಿಯವರಿರಬಹುದು, ಅಂಬೇಡ್ಕರ್ ಇರಬಹುದು, ಇವರ ವಿಚಾರಗಳು ಬಂದಾಗ, ಆ ಜಾಗಕ್ಕೆ ಬೆಲೆ ಕಟ್ಟಿದರೆ ನಮ್ಮ ಸ್ಥಿತಿ ಎಲ್ಲಿಗೆ ಹೋಗುತ್ತದೆ? ನಾವು ಎಲ್ಲಿದ್ದೇವೆ ಎನ್ನುವುದು ಅರ್ಥವಾಗುವುದಿಲ್ಲ. ನಾನು ಒಬ್ಬ ಸ್ನೇಹಿತನಾಗಿ ಮಹೇಶ್ ರವರಲ್ಲಿ ವಿನಂತಿ ಮಾಡುವುದೇನೆಂದರೆ, ದಯವಿಟ್ಟು ಈ ವಿಚಾರದ ಬಗ್ಗೆ ಚರ್ಚೆ ಮಾಡುವುದು ಬೇಡವೆಂದು ವಿನಂತಿ ಮಾಡುತ್ತೇನೆ.

**ಅಧ್ಯಕ್ಷರು:–** Please, ವಾಪಸ್ಸು ಹೋಗಿ.

**ಶ್ರೀ ಎಸ್. ಸುರೇಶ್ ಕುಮಾರ್:–** ತಾವು ಏನಾದರೂ ಮಾತನಾಡಬೇಕಿದ್ದರೆ ತಮ್ಮ ಜಾಗದಲ್ಲಿ ಹೋಗಿ ಮಾತನಾಡಿ.

(ಈ ಹೆಂತದಲ್ಲಿ ಜೆ.ಡಿ.(ಎಸ್) ಪಕ್ಷದ ಮಾನ್ಯ ಸದಸ್ಯರಾದ ಶ್ರೀ ಮಹೇಶ್‌ರವರು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ಮರಳಿದರು)

**ಅಧ್ಯಕ್ಷರು:–** ಮಾತನಾಡಿ. ಮತ್ತೆ ವಾಪಸ್ well ಗೆ ಬರಬೇಡಿ.

**ಶ್ರೀ ಎಸ್.ಆರ್.ಮಹೇಶ್ (ಕೆ.ಆರ್.ನಗರ):–** ಮಾನ್ಯ ಅಧ್ಯಕ್ಷರೆ, ಸ್ವಾಮಿ ವಿವೇಕಾನಂದರ ಸ್ಮಾರಕವನ್ನು ನಿರ್ಮಿಸುವುದಕ್ಕೆ 1,000 ಕೋಟಿ ರೂ.ಗಳನ್ನು